# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1026 (೩೪೩) |
| 2 | ಸದಸ್ಯರ ಹೆಸರು | ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 10.03.2021 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಮತ್ತು ಚಾಮರಾಜ ನಗರ ಜಿಲ್ಲೆಯ ತಾಲ್ಲೂಕುಗಳಿಗೆ ಮಂಜೂರಾಗಿರುವ ಭೂಮಾಪಕರ ಹುದ್ದೆಗಳ ಸಂಖ್ಯೆ ಎಷ್ಟು; ಭರ್ತಿಯಾಗಿರುವ ಹುದ್ದೆಗಳು ಎಷ್ಟು; ಹಾಗೂ ಖಾಲಿ ಇರುವ ಹುದ್ದೆ ಎಷ್ಟು; | ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟಂತೆ ಭೂಮಾಪಕರ ಹುದ್ದೆಗಳ ವಿವರ ಈ ಕೆಳಕಂಡಂತಿದೆ:-<br><br>ಜಿಲ್ಲೆ / ಮಂಜೂರಿಯಾದ ಹುದ್ದೆಗಳು / ಭರ್ತಿಯಾದ ಹುದ್ದೆಗಳು / ಖಾಲಿ ಹುದ್ದೆಗಳು<br>ಮೈಸೂರು / 185 / 178 / 07<br>ಚಾಮರಾಜನಗರ / 78 / 72 / 06 |
| ಆ) | ತಾಲ್ಲೂಕುಗಳಲ್ಲಿ ಭೂಮಾಪಕರ ಕೊರತೆ ಉಂಟಾಗಿದ್ದು, ಜಮೀನಿನ ಅಳತೆ, ಮನೆಗಳ ಇ-ಖಾತೆ ನೀಡುವಲ್ಲಿ ಬಹಳ ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೂಡಲೇ ಸರ್ವೆಯರ್‌ಗಳ ಹುದ್ದೆಗಳನ್ನು ಖಾಯಂ ಅಥವಾ ತಾತ್ಕಾಲಿಕ ವಾಗಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ; | ಬಂದಿದೆ.<br>ಜಿಲ್ಲೆಗಳಲ್ಲಿ ಭೂಮಾಪಕರ ಕೊರತೆಯಿಂದ ಜಮೀನಿನ ಅಳತೆ ಇತ್ಯಾದಿ ಕಾರ್ಯದಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸುವ ಸಲುವಾಗಿ, ಜಿಲ್ಲೆಯ ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಅಲ್ಲದೆ ಹೊಸದಾಗಿ 2072 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿದ್ದು, ದಿನಾಂಕ 1-2-2021 ಮತ್ತು 2-2-2021 ರಂದು ಪರೀಕ್ಷೆಯನ್ನು ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಸದರಿ ಅಭ್ಯರ್ಥಿಗಳಿಗೆ ತರಬೇತಿ ನೀಡಿದ ನಂತರ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜನೆ ಮಾಡಲಾಗುವುದು. |
| ಇ) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಮಂದಿ ಪರವಾನಗಿ ಪಡೆದ ಭೂಮಾಪಕರು ಎಷ್ಟು ವರ್ಷ ಗಳಿಂದ ಸೇವೆ ಸಲ್ಲಿಸು ತ್ತಿದ್ದಾರೆ; ಖಾಯಂಗೊಳಿಸು ವಂತೆ ಅವರು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ; ಅನೇಕ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಪರವಾನಗಿ | ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಪರವಾನಗಿ ನೀಡಲಾಗಿರುವ ಪರವಾನಗಿ ಭೂಮಾಪಕರ ವರ್ಷವಾರು ವಿವರ ಈ ಕೆಳಕಂಡಂತಿದೆ:-<br><br>ಜಿಲ್ಲೆ / ವರ್ಷ: 2002 / 2003 / 2005 / 2008 / 2014 / ಒಟ್ಟು<br>ಮೈಸೂರು / 165 / 01 / 00 / 150 / 00 / **316**<br>ಚಾಮರಾಜನಗರ / 38 / 01 / 01 / 66 / 14 / **120** |

<table>
<tr>
<td></td>
<td>ಪಡೆದ ಭೂಮಾಪಕರನ್ನು ಖಾಯಂ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ?</td>
<td>
<table>
<tr><th>ಜಿಲ್ಲೆ</th><th>ಪರವಾನಗಿ ಚಾಲ್ತಿಯಲ್ಲಿರುವ ಪರವಾನಗಿ ಭೂಮಾಪಕರ ಸಂಖ್ಯೆ</th></tr>
<tr><td>ಮೈಸೂರು</td><td>245</td></tr>
<tr><td>ಚಾಮರಾಜನಗರ</td><td>85</td></tr>
</table>
ಪರವಾನಗಿ ಭೂಮಾಪಕರ ಸೇವೆಯನ್ನು ಸಕ್ರಮಗೊಳಿಸಲು ಕೋರಿಕೆ ಇರುತ್ತದೆ. ಆದರೆ ಪರವಾನಗಿ ಭೂಮಾಪಕರ ಸೇವೆಯನ್ನು ಖಾಯಂಗೊಳಿಸಲು ಅಥವಾ ಸೇವಾಭದ್ರತೆ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.
</td>
</tr>
</table>

**ಸಂಖ್ಯೆ: ಕಂಇ 31 ಎಸ್‌ಎಸ್‌ಸಿ 2021**

**(ಆರ್.ಅಶೋಕ)**
ಕಂದಾಯ ಸಚಿವರು